**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ – ಕರ್ನಾಟಕ**
**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿ ಪೂರಕ ಕಟ್ಟಡಗಳು**
**ನೃಪತುಂಗ ರಸ್ತೆ, ಬೆಂಗಳೂರು – 560 001**

ಆರ್.ಎಂ.ಎಸ್.ಎ /ಶೈಕ್ಷಣಿಕ ಪ್ರವಾಸ / 01 /2011-12 ದಿನಾಂಕ 29-09-2011

# ಸುತ್ತೋಲೆ

ವಿಷಯ:- 2011-12ನೇ ಸಾಲಿನ 10ನೇ ತರಗತಿ ಮಕ್ಕಳಿಗೆ ಶೈಕ್ಷಣಿಕ ಪ್ರವಾಸ ಕುರಿತಂತೆ ಮಾರ್ಗಸೂಚಿ

*******

2011-12ನೇ ಸಾಲಿನ ಆರ್.ಎಂ.ಎಸ್.ಎ ಯೋಜನೆಯಡಿಯಲ್ಲಿ ಸರ್ಕಾರಿ ಪ್ರೌಢ ಶಾಲೆಗಳಲ್ಲಿ 10ನೇ ತರಗತಿ ಓದುತ್ತಿರುವ ಮಕ್ಕಳಿಗೆ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರವು ಪ್ರಸ್ತಾವನೆಯನ್ನು ಪರಿಗಣಿಸಿ ರಾಜ್ಯದಲ್ಲಿ 10ನೇ ತರಗತಿ ಓದುತ್ತಿರುವ ಸರ್ಕಾರಿ ಪ್ರೌಢ ಶಾಲೆಗಳ ಒಟ್ಟು 318953 ಮಕ್ಕಳಿಗೆ ಒಂದು ದಿನದ ಪ್ರವಾಸಕ್ಕೆ ಅನುಮೋದನೆ ನೀಡಿರುತ್ತದೆ. ಅದರಂತೆ ಒಂದು ಮಗುವಿಗೆ 200 ರೂಗಳ ಅನುದಾನವನ್ನು ಮಂಜೂರು ಮಾಡಿರುತ್ತದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಗಳಲ್ಲಿ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡು ನವೆಂಬರ್ ಮತ್ತು ಡಿಸೆಂಬರ್ ತಿಂಗಳೊಳಗಾಗಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ

**ಶೈಕ್ಷಣಿಕ ಪ್ರವಾಸದ ಉದ್ದೇಶಗಳು**

- ಮಕ್ಕಳು ಪರಿಪೂರ್ಣವಾಗಿ ಜಿಲ್ಲೆಯ ಮುಖ್ಯವಾದ ಸ್ಥಳಗಳು ಅಂದರೆ ಸ್ಥಳೀಯ ವೈಜ್ಞಾನಿಕ, ಧಾರ್ಮಿಕ, ಭೌಗೋಳಿಕ, ನೈಸರ್ಗಿಕ, ಐತಿಹಾಸಿಕ, ವಿಜ್ಞಾನ ಮತ್ತು ಕೈಗಾರಿಕೆಗಳು, ಉತ್ತಮವಾಗಿ ನಿರ್ವಹಣೆಗೊಂಡಿರುವ ಶಾಲೆ, ಆಕಾಶವಾಣಿ ಕೇಂದ್ರಗಳು, ಗಣಿ ಪ್ರದೇಶಗಳು, ಉದ್ಯಾನವನ, ಮ್ಯೂಸಿಯಂ ಹಾಗೂ ಪ್ರಖ್ಯಾತ ವ್ಯಕ್ತಿಗಳು ಹುಟ್ಟಿದ ಊರುಗಳ ಬಗ್ಗೆ ಅರಿವು ಮೂಡಿಸುವುದು.
- ಮಕ್ಕಳ ಶೈಕ್ಷಣಿಕ, ಬೆಳವಣಿಗೆ ಸಹಕಾರಿಯಾಗಿಸುವುದು.
- ಮಕ್ಕಳಲ್ಲಿ ಸಹಕಾರ ಮನೋಭಾವ, ಹೊಂದಾಣಿಕೆ ಹಾಗೂ ನಾಯಕತ್ವ ಗುಣಗಳನ್ನು ಬೆಳೆಸುವುದು.
- ಜಿಲ್ಲೆಯ ಇತಿಹಾಸವನ್ನು ಅರಿಯುವದರ ಮೂಲಕ ಸಾಂಸ್ಕೃತಿಕ ಪರಂಪರೆಯನ್ನು ತಿಳಿದು ಜಿಲ್ಲೆಯ ಅಭಿವೃದ್ಧಿಯಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದು.
- ತರಗತಿ ಕಲಿಕೆಗೆ ಪೂರಕ ಮಾಹಿತಿ ಒದಗಿಸುವುದು.
- ಶಾಲಾ ಚಟುವಟಿಕೆಯನ್ನು ಹೊರ ಪ್ರಪಂಚ ಹಾಗೂ ಸಮಾಜದೊಂದಿಗೆ ಸಮನ್ವಯಗೊಳಿಸುವುದು.
- ಮಕ್ಕಳು ಶಾಲೆಯತ್ತ ಹೆಚ್ಚು ಆಕರ್ಷಿತರಾಗಿ ಶಾಲೆ ಬಿಡುವ ಸಾಧ್ಯತೆಗಳು ಕಡಿಮೆಯಾಗುವಂತೆ ಮಾಡುವುದು.
- ಆರ್ಥಿಕವಾಗಿ ಹಿಂದುಳಿದ ಮಕ್ಕಳು ಹಾಗೂ ಹೆಣ್ಣು ಮಕ್ಕಳು ಸಮಾನವಾಗಿ ತಮ್ಮ ಜಿಲ್ಲೆಯ ಅನೇಕ ಸ್ಥಳಗಳ ನೈಜ ಪರಿಸರ ದರ್ಶನ ಪಡೆಯಲು ಸಹಕಾರಿಯಾಗುವುದು.
- ಮಕ್ಕಳ ಕೀಳಿರಿಮೆ ಹೋಗಲಾಡಿಸುವುದು.
- ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸುವುದು.
- ಮಕ್ಕಳಲ್ಲಿ ಪಠ್ಯವಸ್ತುವಿನ ಸಾಮರ್ಥ್ಯಗಳ ಬೆಳವಣಿಗೆಗೆ ಸಹಕಾರಿಯಾಗುವುದು.
- ಗುಂಪು ಚಟುವಟಿಕೆ ಹಾಗೂ ವೈಯುಕ್ತಿಕ ಚಟುವಟಿಕೆಗಳನ್ನೊಳಗೊಂಡ ಯೋಜನೆಗಳನ್ನು ತಯಾರಿಸಲು ಮಕ್ಕಳಲ್ಲಿ ಮನೋಸ್ಥೈರ್ಯ ಬೆಳೆಸುವುದು.
- ವಿದ್ಯಾರ್ಥಿಗಳಲ್ಲಿ ವೀಕ್ಷಣೆ, ಮೌಖಿಕ ಹಾಗೂ ಲಿಖಿತ ಕೌಶಲ್ಯಗಳ ಸಂವರ್ಧನೆ ಮಾಡುವುದು.
- ನೋಡಿ ಕಲಿಯುವುದರಿಂದ ಅನೇಕ ಪರಿಕಲ್ಪನೆಗಳು ಸ್ಪಷ್ಟವಾಗುವುದು.

**ಯೋಜನೆಯ ಆಯವ್ಯಯ**

2011-12ನೇ ಸಾಲಿನಲ್ಲಿ ರಾಜ್ಯದ 34 ಜಿಲ್ಲೆಗಳ 10ನೇ ತರಗತಿ ಓದುತ್ತಿರುವ ಒಟ್ಟು 318953 ಮಕ್ಕಳು ಸದರಿ ಕಾರ್ಯಕ್ರಮದ ಫಲಾನುಭವಿಗಳಾಗಿರುತ್ತಾರೆ. ಕೇಂದ್ರ ಸರ್ಕಾರದಿಂದ ರೂ637.90/- ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ. ಪ್ರತಿ ಜಿಲ್ಲೆಗೆ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡಲಾಗುವುದು.

**ಜಿಲ್ಲಾವಾರು ಪ್ರವಾಸದ ಅನುದಾನವನ್ನು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಜಿಲ್ಲೆಗಳಿಗೆ ರಾಜ್ಯ ಕಛೇರಿಯಿಂದ ಬಿಡುಗಡೆ ಮಾಡಲಾಗುವುದು.**

**ಶೈಕ್ಷಣಿಕ ಪ್ರವಾಸದ ವೇಳಾಪಟ್ಟಿ**

2011-12ನೇ ಸಾಲಿನ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮದಡಿ ಪ್ರವಾಸವನ್ನು **ನವೆಂಬರ್ ಮತ್ತು ಡಿಸೆಂಬರ್** 2011 ರೊಳಗೆ ಪೂರ್ಣಗೊಳಿಸುವುದು.

**ಘಟಕ ವೆಚ್ಚದ ವಿವರ**

ಪ್ರತಿ ವಿದ್ಯಾರ್ಥಿಗೆ ರೂ 200/- ರಂತೆ ಒಟ್ಟು ಒಂದು ತಂಡಕ್ಕೆ ಲಭ್ಯವಾಗುವ ರೂ 10000/- ಅನುದಾನದಲ್ಲಿ ಒಂದು ದಿನಕ್ಕೆ ಖರ್ಚು ಮಾಡಬಹುದಾದ ವಿವರವನ್ನು ಕೆಳಕಾಣಿಸಿದೆ.

ಮೊತ್ತ ರೂ ಗಳಲ್ಲಿ

| | |
|---|---|
| ಕೆ.ಎಸ್.ಆರ್.ಟಿ.ಸಿ ಬಸ್ ಟ್ರಾನ್ಸ್‌ಪೋರ್ಟೇಷನ್ ವೆಚ್ಚ | 7500-00 |
| ಊಟದ ವ್ಯವಸ್ಥೆ (50 ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ಹಾಗೂ ಚಾಲಕ) | 1900-00 |
| ಪ್ರವೇಶ ಶುಲ್ಕಕ್ಕಾಗಿ | 500-00 |
| ಔಷಧಿಗಳಿಗಾಗಿ | 100-00 |
| ಒಟ್ಟು | 10000-00 |

**ಮೇಲಿನ ಘಟಕ ವೆಚ್ಚ ಸಾಂಕೇತಿಕವಾಗಿದ್ದು, ಸ್ವಲ್ಪ ಮಟ್ಟಿಗೆ ಮರು ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶವಿದೆ.**

**ಅನುಷ್ಠಾನ**

ಜಿಲ್ಲಾ ಹಂತದಲ್ಲಿ ಶೈಕ್ಷಣಿಕ ಪ್ರವಾಸ ಸಮನ್ವಯ ಸಮಿತಿಯನ್ನು ಕೆಳಕಂಡಂತೆ ರಚಿಸುವುದು ಹಾಗೂ ಎಲಾ ವಲಯಗಳ ಪ್ರವಾಸಕ್ಕೆ ಸಂಬಂಧಿಸಿದಂತೆ ತಾಲ್ಲುಕುವಾರು ಕ್ರಿಯಾ ಯೋಜನೆಯನ್ನು ಅನುಮೋದಿಸುವುದು ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಮನ್ವಯ ಕಾರ್ಯ ನಿರ್ವಹಿಸುವುದು. ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.

ತಾಲ್ಲೂಕು ಹಂತದಲ್ಲಿ ಪ್ರತಿ ಶೈಕ್ಷಣಿಕ ವಲಯದಲ್ಲಿ ಪ್ರತಿ ತಂಡ ಪ್ರವಾಸ ಹೊರಡುವಲ್ಲಿ ಮಕ್ಕಳ ಆಯ್ಕೆ, ರೂಟ್ ಮ್ಯಾಪ್ ತಯಾರಿಕೆ, ತಂಡದ ಇನ್ಸೂರೆನ್ಸ ಮಾಡಿಸುವುದು, ಊಟ, ಒಟ್ಟಾರೆ ಕ್ರಿಯಾ ಯೋಜನೆ ತಯಾರಿಕೆಯಿಂದ ಹಿಡಿದು ಅನುಷ್ಠಾನದ ವರೆವಿಗೂ ಈ ಸಮಿತಿ ಕಾರ್ಯ ನಿರ್ವಹಿಸುತ್ತದೆ.

| ಕ್ರಮ ಸಂಖ್ಯೆ | ಅಧ್ಯಕ್ಷರು/ಸದಸ್ಯರು | ಜಿಲ್ಲಾ ಹಂತದ ಸಮನ್ವಯ ಸಮಿತಿ | ತಾಲ್ಲೂಕು ಹಂತದ ಸಮನ್ವಯ ಸಮಿತಿ |
|---|---|---|---|
| 01 | ಅಧ್ಯಕ್ಷರು | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ | ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್ |
| 02 | ಉಪಾಧ್ಯಕ್ಷರು | ಡಯಟ್ ಪ್ರಾಂಶುಪಾಲರು | |
| 03 | ಸದಸ್ಯರು | ಎಲ್ಲಾ ತಾಲ್ಲೂಕಿನ ತಹಸೀಲ್ದಾರರು | ತಾಲ್ಲೂಕು ಪಂಚಾಯತ್ ಪ್ರತಿನಿಧಿ |
| 04 | | ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು (ಆರ್.ಎಂ.ಎಸ್.ಎ) | ಕ್ಷೇತ್ರ ಸಮನ್ವಯಾಧಿಕಾರಿಗಳು |
| 05 | | ಎಲ್ಲಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು | |
| 06 | | ಕೆ.ಎಸ್.ಆರ್.ಟಿ.ಸಿ ಪ್ರತಿನಿಧಿ | ಕೆ.ಎಸ್.ಆರ್.ಟಿ.ಸಿ ಪ್ರತಿನಿಧಿ |
| 07 | | ಆರ್.ಟಿ.ಓ ಪ್ರತಿನಿಧಿ | ಆರ್.ಟಿ.ಓ ಪ್ರತಿನಿಧಿ |
| 08 | | ಪ್ರಾಚ್ಯವಸ್ತು ಇಲಾಖೆಯ ಅಧಿಕಾರಿಗಳು | ಪ್ರಾಚ್ಯವಸ್ತು ಇಲಾಖೆಯ ಅಧಿಕಾರಿಗಳು |
| 09 | | ಪ್ರತಿ ತಾಲ್ಲೂಕಿನಿಂದ ಒಂದು ಸ್ವಯಂ ಸೇವಾ ಸಂಘದ ಪ್ರತಿನಿಧಿ. | |
| 10 | | ಜಿಲ್ಲಾ ಕೆ.ಎಸ್.ಟಿ.ಡಿ.ಸಿ ಪ್ರತಿನಿಧಿ | |
| 11 | | | ಪ್ರೌಢ ಶಾಲಾ ಶಿಕ್ಷಕರ ಸಂಘದ ಪ್ರತಿನಿಧಿಗಳು |
| 12 | ಸದಸ್ಯ ಕಾರ್ಯದರ್ಶಿಗಳು | ಉಪನಿರ್ದೇಶಕರು (ಆಡಳಿತ) | ಕ್ಷೇತ್ರ ಶಿಕ್ಷಣಾಧಿಕಾರಿಗಳು |

ಎಸ್.ಎಸ್.ಎ ಚಿಣ್ಣರ ಜಿಲ್ಲಾ ದರ್ಶನ ಕಾರ್ಯಕ್ರಮದಡಿಯಲ್ಲಿ ಮೇಲೆ ತಿಳಿಸಿರುವ ಸಮನ್ವಯ ಸಮಿತಿಯು ಈಗಾಗಲೇ ರಚನೆಯಾಗಿ ಕಾರ್ಯನಿರ್ವಹಿಸುತ್ತಿದ್ದು. ತಾಲ್ಲೂಕು ಹಂತದ ಸಮನ್ವಯ ಸಮಿತಿಯಲ್ಲಿ ಆರ್.ಎಂ.ಎಸ್.ಎ ಗೆ ಸಂಬಂಧಿಸಿದಂತೆ ಪ್ರೌಢ ಶಾಲಾ ಶಿಕ್ಷಕ ಸಂಘದ ಪ್ರತಿನಿಧಿಯನ್ನು ಆಯ್ಕೆ ಮಾಡಿಕೊಳ್ಳುವುದು.

**ವಿದ್ಯಾರ್ಥಿಗಳನ್ನು ಹಾಗೂ ಶಿಕ್ಷಕರ ಆಯ್ಕೆಗೆ ಮಾನದಂಡಗಳು**

**ವಿದ್ಯಾರ್ಥಿಗಳ ಆಯ್ಕೆ**

ಪ್ರತಿ ತಂಡದಲ್ಲಿ 50 ಮಕ್ಕಳಿರುವಂತೆ ಹತ್ತನೇ ತರಗತಿ ಓದುತ್ತಿರುವ ಎಲ್ಲಾ ಮಕ್ಕಳಿಗೆ ಪ್ರವಾಸ ಹಮ್ಮಿಕೊಳ್ಳುವುದು. ಯಾವುದಾದರೂ ಶಾಲೆಯಲ್ಲಿ 50 ಕ್ಕಿಂತಲೂ ಕಡಿಮೆ ಮಕ್ಕಳಿದ್ದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹತ್ತಿರದ ಶಾಲೆಗೆ ಟ್ಯಾಗ್ ಮಾಡಿ ಒಂದು ಬಸ್ಸಿಗೆ ಕನಿಷ್ಠ 50 ವಿದ್ಯಾರ್ಥಿಗಳು ಇಬ್ಬರು ಶಿಕ್ಷಕರು ಇರುವಂತೆ ಯೋಜಿಸುವದು. 2 ಶಾಲೆಗಳ ವಿದ್ಯಾರ್ಥಿಗಳಿದ್ದಲ್ಲಿ ಪ್ರತಿ ಶಾಲೆಯಿಂದ ಇಬ್ಬರು ಶಿಕ್ಷಕರಂತೆ, 50 ವಿದ್ಯಾರ್ಥಿಗಳು ಮತ್ತು 4 ಶಿಕ್ಷಕರಿರುವಂತೆ ಯೋಜಿಸುವುದು.

**ಶಿಕ್ಷಕರನ್ನು ಆಯ್ಕೆ ಮಾಡುವಾಗ ಗಮನಿಸಬೇಕಾದ ಅಂಶಗಳು**

- ತಂಡದಲ್ಲಿ ಕಡ್ಡಾಯವಾಗಿ ಒಬ್ಬ ಪುರುಷ ಶಿಕ್ಷಕರು ಹಾಗೂ ಒಬ್ಬ ಮಹಿಳಾ ಶಿಕ್ಷಕರಿರಬೇಕು.
- ಈ ಪೈಕಿ ಒಬ್ಬರು ಸ್ಕೌಟ್ಸ್ & ಗೈಡ್ಸ್ ತರಬೇತಿ ಹೊಂದಿದ ಶಿಕ್ಷಕರಾಗಿರಬೇಕು.
- ಒಬ್ಬರು ವಿಜ್ಞಾನ/ಕಲಾ ಶಿಕ್ಷಕರಾಗಿರಬೇಕು.
- ಪ್ರಥಮ ಚಿಕಿತ್ಸೆ ಜ್ಞಾನವನ್ನು ಹೊಂದಿರಬೇಕು.
- ಆರೋಗ್ಯವಂತ ಕ್ರಿಯಾಶೀಲ ಉತ್ಸಾಹಿ ಶಿಕ್ಷಕರಾಗಿರಬೇಕು.
- 50 ವರ್ಷಕ್ಕಿಂತ ಕಡಿಮೆ ವಯೋಮಾನದವರಾಗಿರಬೇಕು.
- ಪ್ರವಾಸ ಹೋಗುವ ಸ್ಥಳದ ಪರಿಚಯವನ್ನು ಮನಗಂಡಿರಬೇಕು.
- ಪ್ರತಿ ತಂಡಕ್ಕೂ ಬೇರೆ ಬೇರೆ ಶಿಕ್ಷಕರನ್ನು ಆಯ್ಕೆ ಮಾಡಬೇಕು.

ರಾಜ್ಯ ಯೋಜನಾ ನಿರ್ದೇಶಕರು
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ

**ಪ್ರತಿಗಳು ಕ್ರಮಕ್ಕಾಗಿ:**

1. ರಾಜ್ಯದ ಎಲ್ಲಾ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ).
2. ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾ ಉಪಯೋಜನಾ ಸಮನ್ವಯ ಅಧಿಕಾರಿಗಳು (ಆರ್.ಎಂ.ಎಸ್.ಎ)
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು.

**ಪ್ರತಿಗಳು ಮಾಹಿತಿಗಾಗಿ:**

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ, ಬಹುಮಹಡಿಯ ಕಟ್ಟಡ, ಬೆಂಗಳೂರು.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
3. ಅಪರ ಆಯುಕ್ತರು, ಗುಲ್ಬರ್ಗಾ ಹಾಗೂ ಧಾರವಾಡ ಆಯುಕ್ತಾಲಯ.
4. ರಾಜ್ಯ ಯೋಜನಾ ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ.
5. ಈ ಕಚೇರಿಯ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿಗಾಗಿ.